

ರಾಜಶೇಖರ ಕುಕ್ಕುಂದಾ

ಕಲೆ: ಸಂತೋಷ್ ಸಸಿಹಿತ್ಲು

# ಕಪ್ಪಿರುವೆ- ಕೆಂಪಿರುವೆ

‘ಮದ್ವೆಯಾಗ್ತೀನಂತ!’ ಅಂತು ಕಪ್ಪಿರುವೆ
‘ತಯಾರಿದ್ದೀನಲ್ಲ!!’ ಅಂತು ಕೆಂಪಿರುವೆ

ಬೀಗರ್ನೆಲ್ಲ ಕರ್‍ಸಿಬಿಟ್ತು ಅವ್ವಿರುವೆ
ವಾಲಗದವರ್ನ ಕರ್‍ಸಿಬಿಟ್ತು ಅಪ್ಪಿರುವೆ

ಬಂದೋರೆಲ್ಲ ಅಂದ್ರು ‘ಇದು ಕಪ್ಪಿರುವೆ!’
ಕೆಂಪಿರುವೆ ಅಂತು: ‘ನಾ ಒಪ್ಪಿರುವೆ!!’

‘ಒಪ್ಪಿದ್ಮೇಲೆ ನಮ್ದೇನೈತಿ?’ ಅಂತ ಬಂದೋರು
ಊಟ– ತಾಂಬೂಲ ಸವಿದು ಹರಸಿಹೋದರು

ಕಪ್ಪು– ಕೆಂಪು ಇರುವೆ ಎರಡು ಒಂದುಗೂಡಿದ್ವು
ಹಾಲುಜೇನಿನಂತೆ ಸೇರಿ ಬಾಳ್ವೆ ಮಾಡಿದ್ವು.

